ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಚೇರಿ
ನವನಗರ, ಹುಬ್ಬಳ್ಳಿ – 580025
Telephone : 0836-2223869
Fax : 0836-2224420

HUBLI ELECTRICITY SUPPLY COMPANY LTD.,
(Wholly owned Government of Karnataka undertaking)
Corporate Office,
Navanagar, Hubli – 580 025
Web site : www.hescom.co.in
E-mail : dcafinancebr.hescom@gmail.com

Corporate Identify Number (CIN) : U31401KA2002SGC030437

ಸಂಖ್ಯೆ: ಹುವಿಸಕಂನಿ/ಮುಆಅ/ಉಲೆನಿ(ಬಿ&ಆರ್)/ಲೆ(ಬಿ&ಎಲ್)/ಬಜೆಟ್/2022-23 CYS-2325. ದಿನಾಂಕ: 30 JUN 2022

**ಪೀಠಿಕೆ:**

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ, ಬೆಂಗಳೂರು ಇವರ ಜಕಾತಿ ಆದೇಶ ದಿನಾಂಕ: **04.04.2022** ರ ಆದೇಶದಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಗೆ **2022-23** ನೇ ಆರ್ಥಿಕ ವರ್ಷಕ್ಕೆ ರೂ. **1405.74** ಕೋಟಿಗಳಿಗೆ ಕಂದಾಯ ಬಜೆಟ್ ನ್ನು ಅನುಮೋದಿಸಿರುತ್ತಾರೆ.
2. ಆದ್ದರಿಂದ, ಸದರಿ ಆದೇಶದ ಅನ್ವಯ ಕಂದಾಯ ಬಜೆಟ್ ಬಿಡುಗಡೆಗೊಳಿಸಲು, ಹುವಿಸಕಂನಿಯ ನಿರ್ದೇಶಕರ ಮಂಡಳಿಯ 101ನೇ ಸಭೆಯ ದಿನಾಂಕ 21.06.2022ರಲ್ಲಿ ಅನುಮೋದಿಸಿದಂತೆ, ಸಭೆಯ ನಡಾವಳಿಯ ದಿನಾಂಕ 22.06.2022ರ ಅನುಸಾರ ಒಟ್ಟು ರೂ. **1405.74** ಕೋಟಿಗಳಲ್ಲಿ ರೂ. **1308.02** ಕೋಟಿಗಳನ್ನು ಹಂಚಿಕೆ ಮಾಡಿ ಉಳಿದ ರೂ. **97.72** ಕೋಟಿಗಳಲ್ಲಿ ಎರಡು ವಲಯಗಳಿಗೆ ರೂ.**5.00** ಕೋಟಿಗಳಂತೆ ಹಾಗೂ ಕಂಪನಿ ಕಛೇರಿಯಲ್ಲಿ ರೂ. **87.72** ಕೋಟಿಗಳ ಕಂದಾಯ ಬಜೆಟ್ ಕಾಯ್ದಿರಿಸಲಾಗಿದೆ.
3. ಆರ್ಥಿಕ ವರ್ಷ **2022-23** ನೇ ಸಾಲಿನ ಕಂದಾಯ ಬಜೆಟ್ ನ್ನು ನೇರವಾಗಿ ವಲಯ ಕಚೇರಿಗಳಿಗೆ ಬಿಡುಗಡೆ ಮಾಡಿದ್ದು, ವಿಭಾಗಗಳ ವ್ಯಾಪ್ತಿಯ ಹಂಚಿಕೆ/ ನಿರ್ವಹಣೆ, ಮರುಹೊಂದಾಣಿಕೆಯ ಸಂಪೂರ್ಣ ಜವಾಬ್ದಾರಿಯನ್ನು ವಲಯ ಮುಖ್ಯಸ್ಥರಿಗೆ ವಹಿಸಲಾಗಿದೆ.
4. ಈ ಕಛೇರಿಯ ಆದೇಶ ಸಂಖ್ಯೆ ಸಿ ವಾಯ್ ಎಸ್ 348 ದಿನಾಂಕ: 22.04.2022ರಲ್ಲಿ ಆರ್ಥಿಕ ವರ್ಷ 2022-23 ನೆ ಸಾಲಿಗೆ ಮೊದಲನೆ ತ್ರೈಮಾಸಿಕಕ್ಕೆ ಜಾರಿ ಮಾಡಿದ ತಾತ್ಕಾಲಿಕ ಕಂದಾಯ ಬಜೆಟ್ ಆದೇಶವನ್ನು ಹಿಂಪಡೆಯಲಾಗಿದೆ.

**ಆದೇಶ ಸಂಖ್ಯೆ: ಹುವಿಸಕಂನಿ/ಮುಆಅ/ಉಲೆನಿ(ಹ)/ಲೆ(ಬಿ&ಎಲ್)/ಸಲೆ(ಬಿ&ಎಲ್)/2022-23** ದಿನಾಂಕ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ, ಬೆಂಗಳೂರು ಇವರ **ಜಕಾತಿ** ಆದೇಶ ದಿನಾಂಕ: **04.04.2022** ರನ್ವಯ ಆರ್ಥಿಕ ವರ್ಷ **2022-23** ನೆ ಸಾಲಿಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಗೆ **1405.74** ಕೋಟಿಗಳ ಬಜೆಟ್ ಮಂಜೂರು ಮಾಡಿದ್ದು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು ಅನುಮೋದಿಸಿದ ಮಿತಿಗೊಳಪಟ್ಟು, ಕಂಪನಿಯ

ಆರ್ಥಿಕ ಸ್ಥಿತಿ-ಗತಿಯನ್ನು ಗಮನದಲ್ಲಿ ಇರಿಸಿಕೊಂಡು ಆರ್ಥಿಕ ವರ್ಷ **2021-22** ರಲ್ಲಿ ಮಾಡಿರುವ ಖರ್ಚುವೆಚ್ಚಗಳನ್ನು ಪರಿಗಣಿಸಿ, ವಲಯವಾರು ಕ್ರೋಢೀಕೃತ ಕಂದಾಯ ಬಜೆಟ್ ಕೋರಿಕೆಯ ಅನುಸಾರ, ಆರ್ಥಿಕ ವರ್ಷ **2022-23** ನೆ ಸಾಲಿಗೆ ಕಂದಾಯ ಬಜೆಟ್/ಕಂದಾಯ ಅನುದಾನವನ್ನು ಕೆಳಕಾಣಿಸಿದ ಮೊತ್ತಕ್ಕೆ ಸೀಮಿತಗೊಳಿಸಿ ಆದೇಶಿಸಿದೆ(ವಿಭಾಗವಾರು ಹಂಚಿಕೆ ಮಾಡಿರುವ ತಖ್ತೆಯನ್ನು ಲಗತ್ತಿಸಲಾಗಿದೆ).

**ಆರ್ಥಿಕ ವರ್ಷ 2022-23 ನೆಯ ಸಾಲಿನ ಕಂದಾಯ ಬಜೆಟ್**

ರೂ.ಲಕ್ಷಗಳಲ್ಲಿ

| ಕ್ರ ಸಂ | ವಲಯ/ಶಾಖೆ | ಕೋರಿರುವ ಬಜೆಟ್ | ಹಂಚಿಕೆ ಮೊತ್ತ |
|---|---|---|---|
| 1 | ಹುಬ್ಬಳ್ಳಿ ವಲಯ | 61,232.10 | 45,292.72 |
| 2 | ಬೆಳಗಾವಿ ವಲಯ | 77,902.87 | 57,371.73 |
| 3 | ಹಣಕಾಸು ಶಾಖೆ | 38,927.92 | 23,356.75 |
| 4 | ಆಂತರಿಕ ನಿರ್ವಹಣೆ ಶಾಖೆ | 6472.93 | 4,780.39 |
| 5 | ಒಟ್ಟು | **1,84,535.82** | **1,30,801.58** |
| 6 | ಹುಬ್ಬಳ್ಳಿ ವಲಯಕ್ಕೆ ಕಾಯ್ದಿರಿಸಿದ ಬಜೆಟ್ | | **500.00** |
| 7 | ಬೆಳಗಾವಿ ವಲಯಕ್ಕೆ ಕಾಯ್ದಿರಿಸಿದ ಬಜೆಟ್ | | **500.00** |
| 8 | ಕಂಪನಿ ಕಛೇರಿಯಲ್ಲಿ ಕಾಯ್ದಿರಿಸಿದ ಬಜೆಟ್ | | **8,772.42** |
| 9 | ಕೆಇಆರ್ ಸಿ ಅನುಮೋದಿತ ಕಂದಾಯ ಬಜೆಟ್ | | **1,40,574.00** |

ಆರ್ಥಿಕ ವರ್ಷ **2022-23** ನೇಯ ಸಾಲಿನ ಕಂದಾಯ ಬಜೆಟ್ ಗೆ ಸಂಬಂಧಿಸಿದಂತೆ, ಕೆಳಗಿನ ಮಾರ್ಗಸೂಚಿಗಳನ್ನು ತಪ್ಪದೇ ಅನುಸರಿಸಲು ಸೂಚಿಸಲಾಗಿದೆ.

1. ಮೇಲಿನಂತೆ, ಕಂದಾಯ ಬಜೆಟ್‌ಗೆ ಸಂಬಂಧಿಸಿದಂತೆ, ಹೆಚ್ಚುವರಿಯಾಗಿ ಅವಶ್ಯವಿದ್ದಲ್ಲಿ ವಲಯಗಳಲ್ಲಿ ಕಾಯ್ದಿರಿಸಿದ ರೂ. **5.00** ಕೋಟಿ ಕಂದಾಯ ಬಜೆಟ್ ನಲ್ಲಿ ಕಂಪನಿಗೆ ಭಾರವಾಗದಂತೆ ವಿವೇಚನೆಯಿಂದ ಕಂದಾಯ ಬಜೆಟ್ ನ್ನು ಬಳಸಿಕೊಳ್ಳಲು ಸೂಚಿಸಿದೆ.

2. ಕಂಪನಿ ಕಛೇರಿಯಲ್ಲಿ ಕಾಯ್ದಿರಿಸಿದ ಬಜೆಟ್ ಮೊತ್ತ ರೂ. **87.72** ಕೋಟಿಗಳಿದ್ದು, ವಲಯ ಮುಖ್ಯಸ್ಥರ ವಿವರಣಾತ್ಮಕ ಬೇಡಿಕೆಯೊಂದಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ, ನಿಗಮ ಕಛೇರಿ ಹುಬ್ಬಳ್ಳಿ ಇವರ ಅನುಮೋದನೆ ಪಡೆದುಕೊಂಡು ಹೆಚ್ಚುವರಿ ಬಜೆಟ್ ಬಿಡುಗಡೆಗೆ ಅತಿ ಅವಶ್ಯಕ ಸಂಧರ್ಭಗಳಲ್ಲಿ ಮಾತ್ರ ಪರಿಗಣಿಸಲಾಗುವುದು.

3. ಆರ್ಥಿಕ ವರ್ಷ **2022-23** ನೆ ಸಾಲಿಗೆ ಅಗತ್ಯ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿ ಬೇಕಾಗುವ ಖರೀದಿ ಅನುದಾನವನ್ನು ಸದರಿ ಲೆಕ್ಕ ಶೀರ್ಷಿಕೆಗಳಲ್ಲಿಯ ಕಂದಾಯ ಬಜೆಟ್ ಮೊತ್ತಕ್ಕೆ ಸೀಮಿತಗೊಳಿಸಿ, ಬಿಡುಗಡೆಗೊಳಿಸುವುದನ್ನು ವಲಯ ನಿಯಂತ್ರಣಾಧಿಕಾರಿಗಳ ವ್ಯಾಪ್ತಿಗೆ ವಹಿಸಲಾಗಿದೆ.

4. ಪ್ರತಿಯೊಂದು ಲೆಕ್ಕಘಟಕಗಳವಾರು ಹಂಚಿಕೆಯಾಗಿರುವ ಕಂದಾಯ ಬಜೆಟ್ ನಲ್ಲಿ 33 ಕೆವಿ ವಿದ್ಯುತ್ ಉಪಕೇಂದ್ರ /ಉಪಕೇಂದ್ರದ ಮಾರ್ಗಗಳು / ಎಂ.ಆರ್.ಟಿ. ಹಾಗೂ ಕಾಮಗಾರಿ ವೆಚ್ಚಗಳಿಗೆ ಸಂಬಂಧಿಸಿದ ಕಛೇರಿಗಳು ಒಳಗೊಂಡಿರುತ್ತದೆ.

5. ಆಂತರಿಕ ನಿರ್ವಹಣೆ ಶಾಖೆಗೆ ಬಿಡುಗಡೆ ಮಾಡಿರುವ ಕಂದಾಯ ಬಜೆಟ್ ಮೊತ್ತವು ಸಾರ್ವಜನಿಕ ಸಂಪರ್ಕ ಶಾಖೆಗೆ ಸಂಬಂಧಿಸಿದ ಬಜೆಟ್ ಮೊತ್ತವನ್ನು ಒಳಗೊಂಡಿರುತ್ತದೆ.

6. ಪ್ರತಿಯೊಂದು ಲೆಕ್ಕಘಟಕಗಳಿಂದ ಕಂದಾಯ ವೆಚ್ಚದ ತಃಖ್ತೆಯನ್ನು ಪ್ರತಿ ತಿಂಗಳು **10** ನೇ ತಾರೀಖಿನೊಳಗಾಗಿ ಹಾಗೂ ಖರೀದಿ ಅನುದಾನದ ಬಳಕೆ ಪ್ರಮಾಣ ಪತ್ರಗಳನ್ನು ತ್ರೈಮಾಸಿಕವಾಗಿ ವಲಯದ ನಿಯಂತ್ರಣಾಧಿಕಾರಿಗಳು ಪಡೆದುಕೊಂಡು, ವಲಯದಿಂದ ಕ್ರೋಢೀಕರಿಸಿ, ಲೆಕ್ಕಘಟಕಗಳವಾರು ವಿವರವಾದ ವರದಿಯನ್ನು ಅಭಿಪ್ರಾಯದೊಂದಿಗೆ ಈ ಕಛೇರಿಗೆ ಸಲ್ಲಿಸುವುದು.

7. ಸಂಬಂಧಿಸಿದ ಎಲ್ಲಾ ಲೆಕ್ಕಘಟಕದ ಅಧಿಕಾರಿಗಳೊಂದಿಗೆ ಪ್ರತಿ **3** ತಿಂಗಳಿಗೊಮ್ಮೆ ಕಂದಾಯ ಬಜೆಟ್, ಖರೀದಿ ಅನುದಾನ ಹಾಗೂ ಇತರೆ ವೆಚ್ಚಗಳ ಕುರಿತು ವಲಯ ಕಛೇರಿಯಲ್ಲಿಯೇ ವಲಯದ ನಿಯಂತ್ರಣಾಧಿಕಾರಿಗಳು ಸಭೆಯನ್ನು ಜರುಗಿಸಿ, ಪ್ರತಿಯೊಂದು ಲೆಕ್ಕಘಟಕದವರು ಮಿತವ್ಯಯ ಸಾಧಿಸಲು ಜರುಗಿಸಬೇಕಾದ ಕ್ರಮಗಳ ಕುರಿತು ಪರಿಶೀಲಿಸಿ ಸಂಬಂಧಿಸಿದ ಲೆಕ್ಕ ಘಟಕದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದು. ಸದರಿ ಸಭೆಗಳ ನಡಾವಳಿಯನ್ನು ಸಭೆ ಜರುಗಿದ **3** ದಿನಗಳೊಳಗಾಗಿ ವಲಯದ ನಿಯಂತ್ರಣಾಧಿಕಾರಿಗಳು ಜಾರಿಗೊಳಿಸುವುದು.

8. ಎಲ್ಲಾ ಲೆಕ್ಕಘಟಕದ ಅಧಿಕಾರಿಗಳು ಕಂಪನಿಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಕಂದಾಯ ವೆಚ್ಚ/ಕಂದಾಯ ಬಜೆಟ್/ ಖರೀದಿ ಅನುದಾನ ಹಂಚಿಕೆಯಾದ ಮೊತ್ತವನ್ನು ನಿಯಂತ್ರಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ನಿಯಮಾನುಸಾರ ಪಾಲಿಸಿ, ಈ ವಿಷಯದಲ್ಲಿ ಜಾಗರೂಕತೆ ವಹಿಸದೆ ಇದ್ದಲ್ಲಿ ಸಂಬಂಧಿಸಿದ ಲೆಕ್ಕಘಟಕಗಳ ಮುಖ್ಯಸ್ಥರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ನಿರ್ದೇಶಕರು (ಹಣಕಾಸು)
ಹು.ವಿ.ಸ.ಕಂ.ನಿ

ಪ್ರತಿಗಳು:

1. ಆರ್ಥಿಕ ಸಲಹೆಗಾರರು, ಆಂತರಿಕ ಪರಿಶೋಧನೆ, ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
2. ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.ಅ) ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
3. ಮುಖ್ಯ ಇಂಜಿನೀಯರ್ (ವಿ), ವಲಯ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ/ಬೆಳಗಾವಿ ಇವರ ಮಾಹಿತಿಗಾಗಿ.
4. ಲೆಕ್ಕಾಧಿಕಾರಿಗಳು, ಆಂತರಿಕ ನಿರ್ವಹಣೆ ಶಾಖೆ, ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ ಇವರ ಮಾಹಿತಿಗಾಗಿ.
5. ಅಧೀಕ್ಷಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ, ಹುಬ್ಬಳ್ಳಿ /ಶಿರಸಿ /ಹಾವೇರಿ /ಬೆಳಗಾವಿ /ವಿಜಯಪುರ/ಚಿಕ್ಕೋಡಿ/ಬಾಗಲಕೋಟೆ ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್ (ವಿ)/ ಲೆಕ್ಕಾಧಿಕಾರಿ/ ಲೆಕ್ಕಾಧಿಕಾರಿ (ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗಗಳು, ಹುವಿಸಕಂನಿ ಇವರ ಮಾಹಿತಿ ಹಾಗೂ ಕಟ್ಟು ನಿಟ್ಟಿನ ಅನುಸರಣೆ.
7. ಕಾರ್ಯ ನಿರ್ವಾಹಕ ಇಂಜಿನೀಯರ್ (ಸಿವಿಲ್). ಹುವಿಸಕಂನಿ, ಹುಬ್ಬಳ್ಳಿ/ಎಂ. ಆರ್.ಟಿ ವಿಭಾಗ, ಹುಬ್ಬಳ್ಳಿ/ಬೆಳಗಾವಿ ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಕಾರ್ಯನಿರ್ವಾಹಕ ಇಂಜಿನೀಯರ್ (ವಿ), 33 ಕೆವ್ಹಿ ಸ್ಟೇಷನ್ ಹುವಿಸಕಂನಿ, ನೋಡಲ್ ಆಫೀಸರ್, ಬೆಳಗಾವಿ/ಕಾರವಾರ/ಹುಬ್ಬಳ್ಳಿ/ಹಾವೇರಿ/ಬಾಗಲಕೋಟ/ವಿಜಯಪುರ ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಅಧೀಕ್ಷಕ ಇಂಜಿನೀಯರ್ (ವಿ), ಐಟಿ ಶಾಖೆ, ಕಂಪನಿ ಕಛೇರಿ ಇವರ ಮಾಹಿತಿಗಾಗಿ ಹಾಗೂ ಕಂಪನಿಯ ಜಾಲತಾಣದಲ್ಲಿ ಪ್ರಕಟಿಸಲು.
10. ಹಿರಿಯ ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ತಾಂತ್ರಿಕ), ಹುವಿಸಕಂನಿ, ನಿಗಮ ಕಛೇರಿ, ಹುಬ್ಬಳ್ಳಿ ಇವರ ಮಾಹಿತಿಗಾಗಿ.